ಗೆಸ್ಟ್ ಲೆಕ್ಚರರ್‌ಗಳನ್ನು ನೇಮಕಾತಿ ಮಾಡಿಕೊಳ್ಳಲು ಆದೇಶವನ್ನು ಕೊಟ್ಟಿದ್ದೇವೆ. ನಾವು ಕೂಡಲೇ ಈ ಹುದ್ದೆಗಳಿಗೆ ನೇಮಕಾತಿಯನ್ನು ಮಾಡಿಕೊಂಡು ತಮಗೆ ಖಾಯಂ ಉಪನ್ಯಾಸಕರನ್ನು ಕೊಡುವ ವ್ಯವಸ್ಥೆ ಮಾಡುತ್ತೇವೆ.

ಬೆಳಗಾವಿ ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿನ ಖಾಲಿ ಹುದ್ದೆಗಳ ಭರ್ತಿ.

158(1193) ಶ್ರೀ ತರಳಿ ನಾರಾಯಣರಾವ್ ಗೋವಿಂದ (ಬೆಳಗಾಂ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಬೆಳಗಾವಿ ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ಬೆಳಗಾಂ ನಗರ ಸೇರಿದಂತೆ).

2) ಸಾರ್ವಜನಿಕರ ಹಿತದೃಷ್ಟಿಯಿಂದ ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಸಚಿವರು) :—

1) ಬೆಳಗಾವಿ ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ 620 ಅದರಲ್ಲಿ, ವೈದ್ಯರು 27 ಇತರೆ ಹುದ್ದೆಗಳು 603. (ವಿವರವಾದ ಪಟ್ಟಿಯನ್ನು ಲಗತ್ತಿಸಲಾಗಿದೆ)

2) ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಸ್ನಾತಕೋತ್ತರ ವ್ಯಾಸಂಗವನ್ನು ಪೂರೈಸಿ ನೇಮಕಾತಿ, ನಿರೀಕ್ಷಣೆಯಲ್ಲಿರುವ ವೈದ್ಯರುಗಳನ್ನು ನೇಮಿಸುವುದರ ಮೂಲಕ ಮತ್ತು ಸಾಮಾನ್ಯ ವರ್ಗಾವಣೆ 1999 ರ ಸಮಯದಲ್ಲಿ ಭರ್ತಿ ಮಾಡಲು ಕ್ರಮ ತೆಗೆದಿಕೊಳ್ಳಲಾಗುವುದು.

ಗ್ರಾಮಾಂತರ ಪ್ರದೇಶಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ತುಂಬಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮಾಡುವ ಸಮಯದಲ್ಲಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಖಾಲಿ ಇರುವ ಇತರೆ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಮತ್ತು ಪದೋನ್ನತಿ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

Staff position of Belgaum District Health & Family Welfare Office as on 1st March 1999

Sl. No.	Name of the post sanctioned	Sanctioned post	Working post	Vacant post
1	2	3	4	5
1.	Category Senior			
	District Health & FW Officer	1	1	-
	District Leprosy Officer	1	1	-
`A'	Category - Junior			
	District R.C.H. Officer	1	-	1
	District Malaria Officer	1	1	-
	District F.W. Officer	1	1	-
	Chief Medical Officer	2	2	-
	Deputy Surgeon	2	2	-
	Taluka Health Officers	10	2	8
	Health Officer cum Asst. Surgeon Lady Medical Officer	119	101	18
	Asst. Dental Surgeon	4	1	3
	Category - B.			
	Gazetted Assistant	1	1	-
	District Nursing Officer	2	2	-
	District Health Education Officer	1	1-	
	Physician	2	2	-
	Junior Physician	27	26	1
	Asst. Instructor	1	-	1

1	2	3	4	5
Category Staff				
	Office Superintendent	5	5	-
	First Dn., Assistants	134	84	50
	Stenographer	2	1	1
	Stenographer Gr-II	3	3	-
	Senior typist	1	-	1
	Second Dn. Assistants	62	61	1
	Clerk-cum Typist	14	12	23
	Typist	1	-	1
	Asst. Statistical Officer	4	1	3
	Deputy Health Education Officer	5	5	-
	Block Health Educator	43	13	10
	Projectionist	1	1	-
	Assistant Malaria Officer	1	-	1
	Health Supervisor	1	-	1
	Sr. Health Asst.(male)	96	65	31
	Jr. Health Asst.(Male)	380	296	93
	Sr. Health Asst.(Female)	112	102	10
	Jr. Health Asst.(Female)	657	589	68
	Nursing Supdt. Gr. II	1	1	-
	Sr.Staff Nurse	1	1	-
	Staff Nurse	114	105	9

1	2	3	4	5
	Sr. Pharmacist	157	54	103
	Sr. Lab Technician	5	3	2
	Jr. Lab Technician	130	35	95
	X-ray Technician	18	10	8
	Ophthalmic Assistant	31	4	27
	Asst. Leprosy Officer	1	-	1
	Sr. Non-Medical Supervisor	5	4	1
	Jr. Non-Medical Supervisor	22	21	1
	Physiotherapists	2	1	1
	Para-medical Workers	125	90	35
	B.C.G.Team Leader	1	1	-
	T.B. Health Visitor	2	2-	
	Service Engineer	1	-	1
	Master Artisan	1	-	1
	Skilled Tradesman	1	-	1
	Drivers	84	74	10
	Refrigerator mechanic	1	-1	
	Group D.	455	431	24
	Total	2877	2247	630

SRI TARALE NARAYANARAO GOVIND :— The Hon'ble Minsiter has laredy answered about the total number of posts. But, I want to know exactly how many vacant posts, para medical and medical in particular in Belgaum Civil Hospital are there. Belgaum Civil Hospital is facing difficulties. One is that the Government is not particular about clearing the electricity bill. The KEB people are threating to discontinue electricity to the hospital as well as one of the good unit is working in Belgaum hospital for saline. Belgaum is supplying saline to the other districts. But, nowadays there is an acute shortage of water supply. I want to know exactly whether the Minister is interested to look into the matter personally.

DR. H.C. MAHADEVAPPA :— It is know to the Hon'ble Member that I have visited the district hospital many times. It is one of the good hospitals that we have in the district. It is already included in KHDP, where even the drinking water facility is being included. Regarding staff pattern, I have already told that by April or May end, we are going to recruit doctors as well as para medical staff. The moment that procedure is over somewhere in the month of May, I will see that vacancies are filled up.

ಶ್ರೀಮತಿ ಬಿ.ಟಿ. ಲಲಿತಾನಾಯಕ್ :— ಮಾನ್ಯ ಅಧ್ಯಕ್ಷರೇ, ಕರ್ನಾಟಕದ ಮಂತ್ರಿಗಳು ಕನ್ನಡದಲ್ಲೇ ಉತ್ತರ ಕೊಡಬಹುದಲ್ಲವೇ? ಮಾನ್ಯ ಸದಸ್ಯರು ಇಂಗ್ಲೀಷ್‌ನಲ್ಲೇ ಮಾತನಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಕನ್ನಡದಲ್ಲೇ ಉತ್ತರಕೊಡಬೇಕೆಂದು ಆಗ್ರಹಿಸುತ್ತೇನೆ.

SRI TARALE NARAYANARAO GOVIND :— My request is, please direct the Municipal Corporation Authorities to supply the quantity of water in the hospital by digging some borewells.

ಡಾ: ಹೆಚ್.ಸಿ. ಮಹದೇವಪ್ಪ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಕನ್ನಡ ಗೊತ್ತಿಲ್ಲವೆಂದು ತಿಳಿದು ನಾನು ಇಂಗ್ಲೀಷ್‌ನಲ್ಲಿ ಉತ್ತರ ಹೇಳಬೇಕಾಯಿತು. ಆದರೆ ನನಗೆ ಇಂಗ್ಲೀಷ್‌ನಲ್ಲೇ ಮಾತನಾಡಬೇಕೆಂಬ ಹುಚ್ಚು ಏನೂ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಸದಸ್ಯರು ಕರ್ನಾಟಕದಿಂದಲೇ ಆರಿಸಿ ಬಂದವರಾಗಿದ್ದಾರೆ. ಅವರಿಗೆ ಕನ್ನಡ ಭಾಷೆ ತಿಳಿಯುತ್ತದೆ.

ಡಾ: ಹೆಚ್.ಸಿ. ಮಹದೇವಪ್ಪ :— ನನಗೆ ವಿಚಾರ ಗೊತ್ತಿರಲಿಲ್ಲ. ಆದ್ದರಿಂದಲೇ ನಾನು ಅವರಿಗೆ ನನಗೆ ಅರ್ಥಂಬರ್ಥ ತಿಳಿದ ಇಂಗ್ಲೀಷ್‌ನಲ್ಲೇ ಉತ್ತರ ಕೊಟ್ಟೆ. ಮಾನ್ಯ ಸದಸ್ಯರಿಗೆ ಕನ್ನಡ ಗೊತ್ತಿದ್ದರೆ ಬಹಳ ಸಂತೋಷ

ಶ್ರೀಮತಿ ಭಾಗೀರಥಿ ಬಿ. ಮರುಳುಸಿದ್ದನಗೌಡ :— ಸನ್ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಂತೆ ಖಾಲಿ ಹುದ್ದೆಗಳ ಬಗ್ಗೆ ನನ್ನದೊಂದು ಸಮಸ್ಯೆ ಇದೆ. ತಮ್ಮ ಅಪ್ಪಣೆ ಪಡೆದು ಅದನ್ನು ನಿವೇದಿಸಿಕೊಳ್ಳುತ್ತಿದ್ದೇನೆ. ಸರ್ಕಾರದವರು ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ವಿಚಾರ ಒಂದೆಡೆ ಇರಲಿ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿರತಕ್ಕ ಅನೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ಅನೇಕ ಹುದ್ದೆಗಳು ಖಾಲಿ ಇದ್ದರೂ ಕೂಡ ಕೆಲವು ಕಿರಿಯ ಮಹಿಳಾ ಸಹಾಯಕರನ್ನು ತಾಲ್ಲೂಕಿನಿಂದ ಹೊರಗಡೆ ಪೋಸ್ಟ್ ಮಾಡಲಾಗಿದೆ. ನಂತರದ ದಿನಗಳಲ್ಲಿ ನಾನು ಆ ನೌಕರರನ್ನು ನಿಯೋಜನೆ ಮೇರೆಗೆ ಅವರ ತಾಲ್ಲೂಕಿಗೆ ನೇಮಿಸುವಂತೆ ಮಾಡಿದೆ. ಆದರೆ ಈಗ ನಿರ್ದೇಶಕರು ಆ ನಿಯೋಜನೆಯನ್ನು ರದ್ದು ಮಾಡಿ ಅವರವರ ಸ್ಥಾನಗಳಿಗೆ ವಾಪಸ್ ಆಗಬೇಕೆಂದು ಆದೇಶ ಹೊರಡಿಸಿದ್ದಾರೆ. ಆ ಮಹಿಳೆಯರು ತಮ್ಮ ಸಣ್ಣ ಸಣ್ಣ ಮಕ್ಕಳನ್ನು ಕಟ್ಟಿಕೊಂಡು ಹೊರಗೆ ಹೋಗಿ ಕೆಲಸ ಮಾಡಲು ಸಾಧ್ಯವಾಗದೇ ತಮ್ಮ ನೌಕರಿಗೆ ರಾಜೀನಾಮೆಗಳನ್ನು ಕೊಡಲು ಕೂಡ ತಯಾರಾಗಿದ್ದಾರೆ. ದಯವಿಟ್ಟು ಅವರನ್ನು ಅಲ್ಲೇ ಮುಂದುವರೆಸಬೇಕೆಂದು ನಾನು ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳನ್ನು ಕೋರುತ್ತೇನೆ.

ಅಧ್ಯಕ್ಷರು :— ಡಾಕ್ಟರ್ಸ್, ಉಳಿಕೆ ಪೋಸ್ಟ್ ಹಾಗೇಯೆ ವೇಕೆಂಟ್ ಉಳಿದುಕೊಂಡು ಹೋಗುತ್ತದೆ, ಸಬಾರ್ಡಿನೇಟ್ ಮೆಡಿಕಲ್ ಸ್ಟಾಫ್ ಯಾರಿರುತ್ತಾರೆ, ಆ ರೀತಿ ಇರುವವರನ್ನು ಅವರು ಕೆಲಸ ಮಾಡುವ ಜಾಗದಿಂದ ತೆಗೆದು ದೂರಕ್ಕೆ ಹಾಕುತ್ತಾರೆ, ಅವರಿಗೆ ಕೌಟುಂಬಿಕವಾಗಿ ತೊಂದರೆಗಳಿರುವುದರಿಂದ ಅವರು ಅಲ್ಲಿಗೆ ಹೋಗುವುದಕ್ಕಾಗುವುದಿಲ್ಲ, ಹಾಕಿದ್ದ ಜಾಗದಲ್ಲೂ ತೊಂದರೆ, ಇಲ್ಲೂ ತೊಂದರೆಯಾಗುತ್ತದೆ, ಕನಿಷ್ಠ ಇಲ್ಲಾದರೂ ಮುಂದುವರೆದರೆ ಡಾಕ್ಟರ್ ಇಲ್ಲದೇ ಹೋದರೂ ಏನಾದರೂ ಸಣ್ಣ ಪುಟ್ಟ ಕೆಲಸವಾದರೂ ಆಗುತ್ತದೆ, ಆದರೆ ಈಗ ಅದಕ್ಕೂ ತೊಂದರೆಯಾಗಿದೆ, ಆದ್ದರಿಂದ ಅವರನ್ನಾದರೂ ಅಲ್ಲೇ ಮುಂದುವರೇಸುತ್ತೀರಾ? ನಾವು ಹಿಂದೆ ಮಾಡಿಸಿದ ಡೆಪ್ಯೂಟೇಷನ್ಸ್‌ಗಳನ್ನು ಡೈರೆಕ್ಟರ್ ವಿತ್‌ಡ್ರಾ ಮಾಡಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದ್ದರಿಂದ ಡಾಕ್ಟರ್ಸ್‌ಗಳಿಲ್ಲದ ಕಡೆ ಪ್ಯಾರಾ ಮೆಡಿಕಲ್ ಸ್ಟಾಫ್ ಆದರೂ ಇದ್ದರೆ ಅನುಕೂಲವಾಗುತ್ತದೆ ಅಲ್ಲವೇ?

ಡಾ: ಹೆಚ್.ಸಿ. ಮಹದೇವಪ್ಪ :— ಮಾನ್ಯ ಅಧ್ಯಕ್ಷರೇ, Staff nurse is different and ANMs are different. ANMs are the one who have to travel along the villages. ಅವರು ನ್ಯಾಷನಲ್ ಪ್ರೋಗ್ರಾಮ್ಸ್ ಅನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ, ಫ್ಯಾಮಿಲಿ ಪ್ಲಾನಿಂಗ್ ಮೋಟಿವೇಷನ್ ಮಾಡುವುದಕ್ಕೆ, ಹಾಗೂ ಇಮ್ಯುನೈಸೇಷನ್

ಪ್ರೋಗ್ರಾಮ್‌ಗಳಿಗೆ ಹೋಗಬೇಕಾಗುತ್ತದೆ. ನಿಜವಾಗಿಯೂ ತೊಂದರೆ ಆಗಿದ್ದರೆ ಮಾನ್ಯ ಸದಸ್ಯರು ಹೇಳಿದ್ದರ ಬಗ್ಗೆ ನಾನು ಎಗ್ಸಾಮೀನ್ ಮಾಡುತ್ತೇನೆ.

ಅಧ್ಯಕ್ಷರು :— ಮಾಡುತ್ತಾರಂತೆ ಬಿಡಿ.

ಶ್ರೀಮತಿ ಭಾಗೀರಥಿ ಬಿ. ಮರಳಸಿದ್ದನಗೌಡ :— ಮಾನ್ಯ ಅಧ್ಯಕ್ಷರೇ, ಪ್ರಸೂತಿ ತಜ್ಞರಂತೂ ಹಳ್ಳಿಗೆ ಬರುವುದಿಲ್ಲ. ದಯಮಾಡಿ ಅಲ್ಲಿ ಕೆಲಸ ಮಾಡುತ್ತೇವೆ ಎನ್ನತಕ್ಕವರನ್ನು ಅಲ್ಲೇ ಬಿಡಲಿಕ್ಕೆ ಸರ್ಕಾರ ಅನುಮತಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ :— ಬಹಳಷ್ಟು ನಿಯೋಜನೆಗಳು ಜಿಲ್ಲಾ ಪಂಚಾಯತ್‌ನ ವ್ಯಾಪ್ತಿಯಲ್ಲಿ ಆಗುತ್ತಿರುತ್ತವೆ.

ಅಧ್ಯಕ್ಷರು :— ಮಾನ್ಯ ಸಚಿವರು ಶಾಸಕರು ಹಾಗೂ ಮಾನ್ಯ ಪ್ರಕಾಶ್‌ರವರ ಜೊತೆಯಲ್ಲಿ ಮಾತನಾಡಿ ಒಂದು ಕಾಮನ್ ಡಿಸಿಷನ್ ತೆಗೆದುಕೊಳ್ಳಿ. ಮಾನ್ಯ ಸದಸ್ಯರು ಕೇಳುವುದರಲ್ಲಿ ಅರ್ಥ ಇದೆ ಎನಿಸುತ್ತದೆ. ಗೈನಕಾಲಜಿಸ್ಟ್ ಬರದೇ ಇರುವ ಕಡೆಗೆ ಎಎಸ್‌ಎಂಗಳು ಇದ್ದರೆ, ಅವರಾದರೂ ಕೂಡ ಹೆರಿಗೆ ಇತ್ಯಾದಿಗಳನ್ನು ಅಟೆಂಡ್ ಮಾಡುತ್ತಾರೆ. ಅವರನ್ನೂ ಕಳುಹಿಸಬೇಡಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಡಾ: ಹೆಚ್.ಸಿ. ಮಹದೇವಪ್ಪ :— ಅಲ್ಲಿ ನೌಕರರುಗಳಿಗೆ ತೊಂದರೆಯಾಗಿದ್ದರೆ ನಾನು ಅವರಿಗೆ ಸಹಾಯ ಮಾಡಲು ಆಲೋಚನೆ ಮಾಡುತ್ತೇನೆ.

ಅಧ್ಯಕ್ಷರು :— ಆಲೋಚನೆ ಅಲ್ಲ ಮಾಡುತ್ತೇವೆ ಎಂದು ಹೇಳಿ. ಮಂತ್ರಿಗಳು ಆಲೋಚನೆ ಮಾಡಲು ಆಗುತ್ತದೆಯೇ?

ಡಾ: ಹೆಚ್.ಸಿ. ಮಹದೇವಪ್ಪ :— ಆಯಿತು.

ಕಾಪುವಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹೊಸ ಕಟ್ಟಡ ಕಾಮಗಾರಿ.

159 (814) ಶ್ರೀ ವಸಂತ ವಿ. ಸಾಲಿಯಾನ (ಕಾಪು) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಕಾಪು ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಎಂದಿನಿಂದ ಪ್ರಾರಂಭಿಸಲಾಯಿತು?

(ಆ) ಕಾಲೇಜು ತರಗತಿಗಳು ಈಗ ಯಾವ ಸ್ಥಳದಲ್ಲಿ ನಡೆಯುತ್ತದೆ;

(ಇ) ಕಾಲೇಜಿನ ಹೊಸಕಟ್ಟಡದ ನಿರ್ಮಾಣ ಕಾರ್ಯ ಈಗ ಯಾವ ಹಂತದಲ್ಲಿದೆ? ಇದನ್ನು ಯಾವಾಗ ಸಂಪೂರ್ಣಗೊಳಿಸಲಾಗುವುದು;